ಅಧ್ಯಕ್ಷರು: ನಾನು ಲಾಟರಿ ಟಿಕೆಟ್ ಕೊಂಡುಕೊಂಡು ಇನ್ನೂ ಕಾಯುತ್ತಿದ್ದೇನೆ, ನನಗೂ ಬಂದಿಲ್ಲ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ವೋಲ್ಟೇಜ್ ಸಮಸ್ಯೆ ಇದೆ. ಇದರ ಬಗ್ಗೆ ಪ್ರಶ್ನೆ ಕೇಳಿದ್ದೆ. ಅದನ್ನೂ ಅನ್‌ಸ್ಟಾರ್ಡ್ ಮಾಡಿದ್ದಾರೆ. ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು: ನಾನು ನೋಡುತ್ತೇನೆ. ನನಗೂ ಅರ್ಥವಾಗುತ್ತಿಲ್ಲ. ಅದನ್ನು ನೋಡಿ ನಿಮಗೆ ತಿಳಿಸುತ್ತೇನೆ. ನನಗೆ ಅರ್ಥವಾದ ಮೇಲೆ ನಿಮಗೆ ತಿಳಿಸುತ್ತೇನೆ. ಈಗ ನಿಯಮ 334 ಮೇರೆಗಿನ ವಿಷಯಗಳು. ಶ್ರೀ ಶಿವಾನಂದ ಕೌಜಲಗಿಯವರು.

(ಮಾನ್ಯ ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಚಾಮರಾಜಿನಗರ ಮತ್ತು ಕೊಳ್ಳೇಗಾಲದ ಅರಣ್ಯ ಪ್ರದೇಶವು ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟಕ್ಕೆ ಹಾಗೂ ಮಹದೇಶ್ವರ ಬೆಟ್ಟಕ್ಕೆ ಸೇರಿದೆ.

ಅಧ್ಯಕ್ಷರು: ಆ ಎರಡೂ ವಿಷಯಗಳನ್ನು ಬರೆದು ಕಳಿಸಿದ್ದಿರಾ?

ಶ್ರೀ ವಾಟಾಳ್ ನಾಗರಾಜ್: ಬರೆದು ಕಳಿಸಿದ್ದೇನೆ. ಇದರ ಜೊತೆಗೆ ಮೂಲೆಹೊಳೆ ಬೆಂಕಿ ಪ್ರಕರಣವನ್ನು ಬರೆದು ಕಳಿಸಿದ್ದೇನೆ. ಮಲೆಮಹದೇಶ್ವರಕ್ಕೆ ಸೇರಿದ ಅರಣ್ಯಪ್ರದೇಶದಲ್ಲಿ ಮತ್ತು ಬಿಳಿಗಿರಿರಂಗನ ಬೆಟ್ಟಕ್ಕೆ ಸೇರಿದ ಅರಣ್ಯ ಪ್ರದೇಶದಲ್ಲಿ ಬೆಂಕಿಯು ಬಿದ್ದಿದೆ, ಇದರಿಂದ ಸಾಕಷ್ಟು ನಷ್ಟವಾಗಿದೆ. ಈ ಎರಡು ಬಹಳ ಪ್ರಮುಖವಾದ ವಿಚಾರಗಳು. ಈ ಅರಣ್ಯ ಪ್ರದೇಶಕ್ಕೆ ಯಾರೂ ಹೋಗಬಾರದು ಎನ್ನುವ ನಿರ್ಬಂಧ ಇರುವಾಗ ಅಕ್ರಮವಾಗಿ ಪ್ರತಿದಿನ ಒಂದು ಕೋಟಿ ರೂಪಾಯಿಯ ಗ್ರಾನೈಟ್ ಕಲ್ಲನ್ನು ತೆಗೆಯುತ್ತಿದ್ದಾರೆ. ಈ ಬಗ್ಗೆ ಎಲ್ಲಾ ನಮ್ಮ ವಿರೋಧ ಪಕ್ಷಗಳ ನಾಯಕರು ಸಹಿಮಾಡಿ ತಮಗೆ ಕಳಿಸಿದ್ದೇವೆ. ಇದು ಬಹಳ ಪ್ರಮುಖವಾದ ವಿಚಾರ. 500 ಎಕರೆ ಪ್ರದೇಶಕ್ಕೆ ಬೆಂಕಿಬಿದ್ದಿದೆ. ದಯಮಾಡಿ ಈ ಬಗ್ಗೆ ಗಮನಹರಿಸಿ.

ಅಧ್ಯಕ್ಷರು: ಆಗಬಹುದು.

ಶ್ರೀ ವಾಟಾಳ್ ನಾಗರಾಜ್: ಚಾಮರಾಜನಗರ ಮತ್ತು ಕೊಳ್ಳೇಗಾಲ ಮತ್ತು ಬಿಳಿಗಿರಿರಂಗನ ಬೆಟ್ಟದಲ್ಲಿ ಧಾರ್ಮಿಕವಾದ ಪರಿಸ್ಥಿತಿ ಉದ್ಭವವಾಗಿ, ಧರ್ಮದ ಅವಹೇಳನವಾಗುತ್ತಿದೆ, ಗೂಂಡಾಗಳು ಕಲ್ಲನ್ನು ತೆಗೆದು ಬಹಳ ತೊಂದರೆಯನ್ನು ಕೊಡತಕ್ಕ ಪರಿಸ್ಥಿತಿ ಇದೆ. ಅರಣ್ಯ ಪ್ರದೇಶಕ್ಕೆ ಸಮಗ್ರವಾಗಿ ನಾಶವಾಗುತ್ತಿದೆ. ಎರಡೂ ಪ್ರದೇಶಗಳಲ್ಲಿ ಅರಣ್ಯ ನಾಶವಾಗುತ್ತದೆ.

ಅಧ್ಯಕ್ಷರು: ಮಾನ್ಯ ಸದಸ್ಯರು ಅಫಿಷಿಯಲ್ ಗ್ಯಾಲರಿಯಲ್ಲಿ ಸ್ಥಂದಿಸುವುದಕ್ಕೆ ಬಹಳ ಪ್ರಯತ್ನಗಳು ನಡೆಯುತ್ತಿದೆ.

I will have to discourage such trends. The official gallery is meant to assist the Council of Ministers. Not every member can walk into the official gallery and engage them in a dialogue. This is not the convention.

SRI: K. LAKKAPPA: We have got privileges.

MR. SPEAKER: They are here to assist the Council of Ministers. I have specifically allowed them .ನೀವು ಮಂತ್ರಿಗಳಾದಾಗ certainly you will enjoy that privilege. The Ministers are Ministers.

ಶ್ರೀ ಮಾಟಾಳ್ ನಾಗರಾಜ್: ತಮ್ಮ ಮಾದವನ್ನು ನಾವು ಒಪ್ಪುತ್ತೇವೆ, ನಾವು ಯಾರು ಅಲ್ಲಿಗೆ ಹೋಗುವುದಿಲ್ಲ.

ಅಧ್ಯಕ್ಷರು: ತಾವು ಯಾರು ಅಲ್ಲಿಗೆ ಹೋಗಬೇಡಿ. ಯಾರು ಹೋಗಬೇಕೋ ಅವರು ಮಾತ್ರ ಹೋಗಲಿ.

ಶ್ರೀ ಮಾಟಾಳ್ ನಾಗರಾಜ್: ಅದು ಬರಿ ಮಂತ್ರಿಗಳಿಗೆ ಮಾತ್ರ. ನನ್ನ ಎರಡು ವಿಷಯಗಳ ಬಗ್ಗೆ ಬರೆದು ಕಳಿಸಿದ್ದೇನೆ.

ಅಧ್ಯಕ್ಷರು: ತಾವು ಎರಡನ್ನು ಕಳಿಸಿದ್ದೀರಿ. ಅವೆರಡನ್ನೂ ನಾನು ನೋಡುತ್ತೇನೆ.

ಶ್ರೀ ಎಂ. ಮಹದೇವ್: ಸ್ವಾಮಿ, ಹ್ಯಾಂಡ್‌ಲೂಂ ಕಾರ್ಪೊರೇಷನ್‌ನಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ. ಲೋಪದೋಷ ನಡೆದಿದೆ. ಅದರ ಬಗ್ಗೆ ಪ್ರಶ್ನೆ ಹಾಕಿದ್ದೇನೆ. ಅಲ್ಲಿ ಸಿಕ್ಕಾಪಟ್ಟೆ ರೀಬೇಟ್ ಕೊಟ್ಟಿದ್ದಾರೆ. ಸಿಕ್ಕಾಪಟ್ಟೆ ಪರ್‌ಚೇಸ್ ಮಾಡಿದ್ದಾರೆ. ಹಣದ ದುರುಪಯೋಗವಾಗಿದೆ. ಇದರ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಉತ್ತರ ಇಲ್ಲ. ಅಲ್ಲಿ ಲಕ್ಷಾಂತರ ರೂಪಾಯಿ ದುರುಪಯೋಗವಾಗುತ್ತಿದೆ.

ಶ್ರೀ ಆರ್ ವಿ. ದೇಶಪಾಂಡೆ: ಗ್ರಾನೈಟ್ ಬಗ್ಗೆ ಮತ್ತು ಫಾರೆಸ್ಟ್‌ಗೆ ಬೆಂಕಿಬಿದ್ದ ಬಗ್ಗೆ. ಎರಡೂ ವಿಚಾರದಲ್ಲಿ ತಾವು ಆದಷ್ಟು ಬೇಗ ಅವಕಾಶ ಕೊಡಬೇಕು.

ಅಧ್ಯಕ್ಷರು: ನಾನು ಪರಿಶೀಲನೆ ಮಾಡಿ ಎರಡು ವಿಷಯಗಳ ಬಗ್ಗೆ ಗಮನಹರಿಸಿ ತಮಗೆ ತಿಳಿಸುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ: ಕಾಡು ಸುಡುತ್ತಿರುವ ಬಗ್ಗೆ ನಾವು ಕಳಿಸಿದ್ದೆವು.

ಅಧ್ಯಕ್ಷರು: ಅದರ ಬಗ್ಗೆ ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೆ, ನನಗೆ ಲಿಖಿತ ಮೂಲಕ ಉತ್ತರ ಬಂದಿಲ್ಲ. ಹ್ಯಾಂಡ್‌ಲೂಮ್ ಕಾರ್ಪೊರೇಷನಲ್ಲಿ ಲಕ್ಷಾಂತರ ರೂಪಾಯಿಗಳ ಹಣ ದುರುಪಯೋಗವಾಗಿದೆ. ಕಳಪೆ ದರ್ಜಿಯ ಬಟ್ಟೆಗಳನ್ನು ಮಾರಾಟ ಮಾಡುತ್ತಿದ್ದಾರೆ. 40 ಪರ್ಸೆಂಟ್ ರಿಬೇಟ್ ಕೊಡುತ್ತಿದ್ದಾರೆ, ಇದಕ್ಕೆ ಯಾರು ಜವಾಬ್ದಾರಿ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ಲಿಖಿತ ಉತ್ತರ ಬಂದಿಲ್ಲ.

ಅಧ್ಯಕ್ಷರು: ನಾನು ಅದನ್ನು ನೋಡಿಸುತ್ತೇನೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗಳ ಬಗ್ಗೆ ತಮ್ಮಲ್ಲಿ, ನಾನು ವಿಶೇಷವಾಗಿ ವಿನಂತಿ ಮಾಡುತ್ತೇನೆ. ಕಳೆದ ಅಧಿವೇಶನದಲ್ಲಿ ನನ್ನ ಕೆಲವು ಅನ್‌ಸ್ಟಾರ್ಡ್ ಪ್ರಶ್ನೆಗಳಿಗೆ unstarred questions, it is placed on the table of the House ಎಂದು ಹೇಳಿದ್ದಾರೆ.

ಆದರೆ ಇಲ್ಲಿಯವರೆಗೂ ಕಂಡ ಲಿಖಿತ ಉತ್ತರ ಬಂದಿಲ್ಲ, ಹಾಗಾದರೆ ಪ್ರಶ್ನೆಗಳನ್ನು ಏಕೆ ಕೇಳಬೇಕು, ಏತಕ್ಕೋಸ್ಕರ ಪ್ರಶ್ನೆಯನ್ನು ಹಾಕಬೇಕು. ಕಳೆದ ಸಲ ತಮ್ಮ ಗಮನಕ್ಕೆ ಈ ವಿಷಯವನ್ನು ತಂದಿದ್ದೇನೆ. ಆದರೆ ಪೋಸ್ಟ್‌ನಲ್ಲಾದರೂ ಉತ್ತರವನ್ನು ಮನೆಗೆ ಕಳಿಸಬಹುದಿತ್ತು, ಅದೂ ಕೂಡ ಆಗಿಲ್ಲ. ಈಗಲಾದರೂ ಕೊಡುತ್ತಾರೆಂದು ನಿರೀಕ್ಷೆ ಮಾಡಿದ್ದೆ ಅದೂ ಆಗಲಿಲ್ಲ.

ಇವತ್ತು ಕೂಡ ನನ್ನ 2-3 ಪ್ರಶ್ನೆಗಳು ಅನ್‌ಸ್ಟಾರ್ಡ್ ಆಗಿವೆ. ಅದಕ್ಕೂ ಕೂಡ ಇಲ್ಲಿಯವರೆಗೆ ಉತ್ತರ ಬಂದಿರುವುದಿಲ್ಲ. ಈಗ ನಮ್ಮನ್ನು ಸರ್ಕಾರ ಇಷ್ಟು ಕೇರ್‌ಲೆಸ್ಸಾಗಿ ಭಾವನೆ ಮಾಡುವುದಾದರೆ ನಮ್ಮ ಗತಿ ಏನಾಗಬೇಕು? ನಾವು ಏತಕ್ಕೆ ಈ ಪ್ರಶ್ನೆ ಕೇಳಬೇಕು? ಬಹಳ ಮುಖ್ಯವಾದಂತಹ ಅದೂ ರಾಜ್ಯದ ಹಿತವನ್ನು ಕಾಪಾಡತಕ್ಕಂತಹ

ಪ್ರಶ್ನೆಗಳಿವೆ. ಅಲ್ಲದೆ ಭ್ರಷ್ಟ ಅಧಿಕಾರಿಗಳ ಬಗ್ಗೆ ಏನಾದರೂ ಪ್ರಶ್ನೆ ಕೇಳಿದರೆ. They will never see the light of the day.

ಅದನ್ನು ಮುಚ್ಚಿಡತಕ್ಕಂತಹ ಸರ್ವ ಪ್ರಯತ್ನಗಳನ್ನು ಸರ್ಕಾರದಲ್ಲಿ ಮಾಡುತ್ತಿದ್ದಾರೆ. ಬಹಳ ಗುರುತರವಾಗಿರತಕ್ಕಂತಹ ಪ್ರಶ್ನೆಗಳನ್ನು ಕೇಳಿದರೆ ಮತ್ತು ಕೆಲವು ಅಧಿಕಾರಿಗಳು ಮಾಡಿರತಕ್ಕಂತಹ ಕೋಟ್ಯಾಂತರ ರೂಪಾಯಿಗಳ ದುರ್ವ್ಯವಹಾರದ ಬಗ್ಗೆ ಪ್ರಶ್ನೆ ಕೇಳಿದರೆ ಅದು ಈ ದಿನದ ಬೆಳಕನ್ನೇ ಕಾಣತಕ್ಕಂಥ ಸಂದರ್ಭವೇ ಒದಗಿ ಬರುತ್ತಿಲ್ಲ. ಕಳೆದ ಅಧಿವೇಶನದಲ್ಲಿ ಕೇಳಿದಂತಹ ಪ್ರಶ್ನೆಗಳಿಗೆ ಇಲ್ಲಿಯವರೆಗೂ ಉತ್ತರ ಬಂದಿರುವುದಿಲ್ಲ. ಹಾಗಾದರೆ ನಮಗೆ ಯಾರು ದಿಕ್ಕು, ಮಾನ್ಯ ಅಧ್ಯಕ್ಷರೇ, ತಾವು ನಮಗೆ ರಕ್ಷಣೆ ಕೊಡಬೇಕು. ಮತ್ತೆ ಒಂದು ಸ್ಟೇಟ್‌ಮೆಂಟ್‌ನ್ನು ಕೂಡ ತಾವು ಇಡಿಸಬೇಕು. ನಾನು ಕಳೆದ ಸಾರಿ ಕೊನೆಯ ದಿವಸ ತಮ್ಮ ಗಮನಕ್ಕೆ ತರಲು ಒಂದು ಸ್ಟೇಟ್‌ಮೆಂಟ್‌ನ್ನು ಓದಿದೆ. ನಾನು ಎಷ್ಟು ಪ್ರಶ್ನೆಗಳನ್ನು ಕೇಳಿದ್ದೆ. ಎಷ್ಟು ಪ್ರಶ್ನೆಗಳಿಗೆ ಉತ್ತರ ಬಂದಿದೆ, ಎಷ್ಟು ಪ್ರಶ್ನೆಗಳಿಗೆ ಉತ್ತರ ಬರಲಿಲ್ಲ ಎಂಬುದನ್ನು ಕಳೆದ ಅಧಿವೇಶನದಲ್ಲಿ ನಾನು ತಮ್ಮ ಗಮನಕ್ಕೆ ತಂದಿದ್ದೆ. ಅದು ಸರಿಹೋಗತ್ತದೆಂದು ನಾನು ಭಾವಿಸಿದೆ. ಆದರೆ ಇಲ್ಲಿಯವರೆಗೂ ಸರಿಹೋಗಲಿಲ್ಲ. ಇವತ್ತಿಗೂ ಕೂಡ ನನ್ನ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಹಾಗಾದರೆ ನಾನು ಯಾರನ್ನು ಕೇಳಬೇಕು. ನಾವು ಇಲ್ಲಿ ಪತಕ್ಕೋಸ್ಕರ ಬರಬೇಕಾಗಿದೆ. ಓಗೆ ಇವತ್ತು ಮೂಲಭೂತವಾಗಿರತಕ್ಕಂತಹ ಪ್ರಶ್ನೆ ಉದ್ಭವವಾಗುತ್ತಿದೆ. ಆದರಿಂದ ದಯವಿಟ್ಟು ತಾವು ನಮ್ಮ ರಕ್ಷಣೆಗೆ ಬರಬೇಕು. ಸರ್ಕಾರ ಎಲ್ಲ ಪ್ರಶ್ನೆಗಳಿಗೂ ಉತ್ತರ ಒದಗಿಸಬೇಕು. ಇಲ್ಲದಿದ್ದರೆ ಉತ್ತರ ಕೊಡುವುದಿಲ್ಲವೆಂದು ಹೇಳಲಿ, ನನ್ನ ಕ್ಷೇತ್ರದಲ್ಲಿ ಇರತಕ್ಕಂತಹ ಜನರಿಗೆ ಸರ್ಕಾರ ಪ್ರಶ್ನೆಗಳಿಗೆ ಉತ್ತರ ಕೊಡುವುದಿಲ್ಲವಂತೆ ಎಂದು ಹೇಳುತ್ತೇವೆ. ಇಂತಹ ಒಂದು ಅಸಹಾಯಕ ಪರಿಸ್ಥಿತಿಗೆ ನಮ್ಮನ್ನು ದೂಡತಕ್ಕಂಥಾದ್ದು ಸರ್ಕಾರಕ್ಕೆ ಯಾವ ವಿಧದಲ್ಲಿಯೂ ಕೂಡ ಗೌರವ ತರತಕ್ಕಂತಹದಲ್ಲ. ದಯವಿಟ್ಟು ತಾವು ಈ ವಿಚಾರದಲ್ಲಿ ಸರ್ಕಾರಕ್ಕೆ ಇವತ್ತು ಚೀಮಾರಿ ಹಾಕಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಸನ್ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಕೇಳಲಾದ 120 ಪ್ರಶ್ನೆಗಳಲ್ಲಿ ನನ್ನದೂ 5 ಪ್ರಶ್ನೆಗಳು ಸೇರಿವೆ. ಇವರಲ್ಲಿ ಒಂದು ಪ್ರಶ್ನೆಗೂ ಉತ್ತರ ಬಂದಿಲ್ಲ.

ಅಧ್ಯಕ್ಷರು: ಅದನ್ನು ವಿಚಾರಿಸೋಣ.

ಶ್ರೀ ಎಂ. ವೀರಪ್ಪ ಮೊಯಿಲಿ: ಸನ್ಮಾನ್ಯ ಅಧ್ಯಕರೇ, ಮಾನ್ಯ ಸದಸ್ಯರಾದ ಶ್ರೀ ಬೈರೇಗೌಡರು ಮತ್ತು ವಾಟಾಳ್ ನಾಗರಾಜ್ ಈ ಲಿಖಿತ ಮೂಲಕ ಉತ್ತರ ಕೊಡತಕ್ಕಂತಹ ಪ್ರಶ್ನೆಗಳ ಬಗ್ಗೆ ಮತ್ತು ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿಯೇ ಉತ್ತರ ಕೊಡಲಾಗುವುದು. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸರ್ಕಾರ ಉತ್ತರವನ್ನು ಕೊಡಬೇಕಾಗುತ್ತದೆ. ಯಾವುದಕ್ಕೆ ಚುಕ್ಕೆ ಗುರುತು ಇರಬೇಕು, ಯಾವುದು ಚುಕ್ಕೆ ಗುರುತಿಲ್ಲದೆ ಇರಬೇಕು ಎಂದು ಆಯ್ಕೆ ಮಾಡುವಂತಹ ಅಧಿಕಾರ ಮಾನ್ಯ ಸಭಾಪತಿಗಳಿಗೆ ಇರತಕ್ಕದ್ದು, ನಮಗಲ್ಲ ತಾವು ಚುಕ್ಕೆ ಗುರುತಿಲ್ಲದ ಪ್ರಶ್ನೆಯನ್ನು ಮಾಡಿದ ಮೇಲೆ ಸರ್ಕಾರಕ್ಕೆ ಕಳಿಸಿದ ಮೇಲೆ ಉತ್ತರ ಕೊಡತಕ್ಕದ್ದು ನಮ್ಮ ಕರ್ತವ್ಯ. ಪ್ರೊರೋಗ್ ಆಗಲಿ, ಪ್ರೊರೋಗ್ ಆದಮೇಲೆ ಕೂಡ ಉತ್ತರಬೇಕಾದ್ದು ನಮ್ಮ ಕರ್ತವ್ಯ. ಅದನ್ನು ನಾವು ಕೂಡುತ್ತಿದ್ದೇವೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ: ಇದನ್ನು ಏತಕ್ಕೆ ಹಂಚಿದ್ದಾರೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು: ಅವರನ್ನು ಅರ್ಥಮಾಡಿಕೊಳ್ಳೋಣ. ನಿಮ್ಮ ಪ್ರಶ್ನೆ ನನಗೆ ಅರ್ಥವಾಯಿತು. ನಾನು ಅವರನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ದಯವಿಟ್ಟು ಅವಕಾಶವನ್ನು ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ: ಅವರು ಇದುವರೆಗೆ ಸ್ಟಾರ್ಡ್ ಚುಕ್ಕೆ ಗುರುತಿನ ಪ್ರಶ್ನೆಗಳ ಬಗ್ಗೆ ಮಾತನಾಡುತ್ತಿದ್ದರು. ಈಗ ಅವರಿಗೆ ಅನ್‌ಸ್ಟಾರ್ಡ್ ಎಂದು ಗೊತ್ತಾಗುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ, ನಾವು ಇದುವರೆಗೆ ಏನು ಒಪ್ಪಿಕೊಂಡಿದ್ದೇವೆ ಆ ನಿಯಮದ ಪ್ರಕಾರ ಇದೆ. ಕ್ವಶ್ಚನ್ಸ್ ಇಲ್ಲಿ ಪ್ರಿಂಟ್ ಆಗಿದೆ. ಉತ್ತರಗಳನ್ನು ಪ್ರತ್ಯೇಕವಾಗಿ ಒದಗಿಸಿದ್ದೇವೆ. ಇದಕ್ಕೆ ಬಹುಶಃ ನಾವು ನಿಯಮಗಳನ್ನು ಬದಲಾವಣೆ ಮಾಡುವುದು ಒಳ್ಳೆಯದೆಂದು ನಮ್ಮ ಸೂಚನೆ. ಈಗಿರತಕ್ಕಂಥ ನಿಯಮಗಳ ಪ್ರಕಾರ ಅದು ಲಿಖಿತವಿರಬಹುದು ಅಥವಾ ಮೌಖಿಕವಾಗಿ ಕೊಡತಕ್ಕಂಥ ಉತ್ತರ ಇರಬಹುದು. ಉತ್ತರಗಳನ್ನು ಪ್ರಶ್ನೆಗಳ ಜೊತೆಯಲ್ಲಿ ಅಚ್ಚುಮಾಡುವುದಿಲ್ಲ, ಇದು ಒಂದು ಪರಂಪರೆ, ಈ ಹೊಸ ನಿಯಮಗಳನ್ನು ಕೆಲವು ವರ್ಷಗಳ ಹಿಂದೆ ಮಾಡಿದ್ದಾಗಿದೆ. ಈ ಹೊಸ ನಿಯಮಾವಳಿಗಳನ್ನು ಬದಲಾವಣೆ ಮಾಡಬೇಕು ಎಂದು ಆಗಾಗ್ಗೆ ಈ ಸದನದ ಸದಸ್ಯರು ಹೇಳುತ್ತಿದ್ದಾರೆ, ಅದಕ್ಕೆ ನಾವೂ ಒಪ್ಪಿಕೊಂಡಿದ್ದೇವೆ. ಇದರ ಪ್ರಕಾರ ಏನಾಗುತ್ತದೆಂದರೆ, ಪ್ರಶ್ನೆಗಳು ಮಾತ್ರ ಅಚ್ಚಾಗುತ್ತವೆ, ಉತ್ತರಗಳು ಸೈಕ್ಲೋಸ್ಟೈಲ್ ಆಗಿ ಸದಸ್ಯರಿಗೆ ಬರುತ್ತದೆ. ಆದರೆ ಇದರ ಜೊತೆಯಲ್ಲಿ ಕೂಡ ಅಚ್ಚಾಗಬೇಕಾದರೆ ನಮ್ಮದೇನು ಅಡ್ಡಿ ಇಲ್ಲ.

ಶ್ರೀ ವಾಟಾಳ್ ನಾಗಾರಾಜ್: ಮಾನ್ಯ ಅಧ್ಯಕ್ಷರೇ, ನಾವು ಇದರಲ್ಲಿಯೇ ಮುದ್ರಣವಾಗಬೇಕೆಂದು ಕೇಳುತ್ತಿಲ್ಲ; ಬೇರೆಯೇ ಕೊಡಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈಗ ಏನೋ ಹೇಳಿದರಲ್ಲ, ಈಗ ಯಾವುದನ್ನೂ ಮಂಡಿಸಿದಿರಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ: ಅನ್-ಸ್ಟಾರ್ಡ್ ಕ್ವಶ್ಚನ್ಸ್‌ಗೆ ಉತ್ತರವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು: ಈಗ ಎಷ್ಟು ಪ್ರಶ್ನೆಗಳಿಗೆ ಉತ್ತರಗಳು ಬಂದಿದೆಯೋ ಅವುಗಳನ್ನು ನೀವು ಸದನದ ಮುಂದೆ ಇಟ್ಟಿದ್ದೀರಿ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಗಮನಿಸಬೇಕು. 120 ಪ್ರಶ್ನೆಗಳು ಏನು ಬಂದಿವೆ, ಇದರಲ್ಲಿ 40-50 ಪ್ರಶ್ನೆಗಳಿಗೆ ಕಾಲಾವಕಾಶವನ್ನು ಕೇಳಿದ್ದಾರೆ. ಕಾಲಾವಕಾಶವನ್ನು ಕೇಳತಕ್ಕಂಥ ಪ್ರವೃತ್ತಿ ಏನಿದೆ ಅದು ಅದಷ್ಟು ಕಡಿಮೆಯಾಗಿರಬೇಕು ಎನ್ನುವುದು ನಾವು, ನೀವು ಎಲ್ಲ ಒಪ್ಪತಕ್ಕಂಥ ಸೂತ್ರ. ಆದ್ದರಿಂದ ಇನ್ನು ಮುಂದೆ ಆ ಸೂತ್ರದ ಚೌಕಟ್ಟಿನಲ್ಲಿ ತಾವು ಸರ್ಕಾರದವರು ಉತ್ತರಗಳನ್ನು ಹೆಚ್ಚಿನ ಕಾಳಜಿ ವಹಿಸಿ, ಆಸಕ್ತಿ ವಹಿಸಿ ಒದಗಿಸಿಕೊಡಬೇಕಾಗಿರತಕ್ಕಂಥಾದ್ದು ನಿಮ್ಮ ಕರ್ತವ್ಯವೆಂದು ಹೇಳದೆ ವಿಧಿಯಿಲ್ಲ. ಇದನ್ನು ನೀವು ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ, ತಾವು ಇವತ್ತು ಪಟ್ಟಿಯಲ್ಲಿರತಕ್ಕಂಥ ಪ್ರಶ್ನೆಗಳ ಬಗ್ಗೆ ಹೇಳಿದ್ದೀರಿ. ಕಳೆದ ಅಧಿವೇಶನದಲ್ಲಿ ಇದೇ ತರಹ ಅನ್‌ಸ್ಟಾರ್ಡ್ ಆಗಿರತಕ್ಕಂಥ ನನ್ನ ಪ್ರಶ್ನೆಗಳಿಗೆ ಇಲ್ಲಿಯವರೆಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು: ಅದು ಬೇರೆ ಕ್ಯಾಟಗರಿಯಲ್ಲಿ ಬರುತ್ತದೆ. ಅದನ್ನು ಆಮೇಲೆ ಪರಿಶೀಲನೆ ಮಾಡೋಣ. ತತಕ್ಷಣವಲ್ಲಿ ಈ ಲಿಖಿತಮೂಲಕ...

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮಂತ್ರಿಗಳು 50 ಪ್ರಶ್ನೆಗಳಿಗೆ ಉತ್ತರಕೊಡಲು ಕಾಲಾವಕಾಶವನ್ನು ಕೇಳಿದ್ದಾರೆ. ಮಿಕ್ಕ ಪ್ರಶ್ನೆಗಳಿಗೆ ಉತ್ತರ ಕೊಡಬೇಕಲ್ಲ.

ಅಧ್ಯಕ್ಷರು: ಮಿಕ್ಕ ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಅದನ್ನು ಸೆಟ್‌ಮಾಡಿ ಕಳುಹಿಸಿ ಕೊಡಬೇಕಾಗಿದೆ. ನನ್ನ ಸೆಕ್ರೆಟರಿಯೇಟ್‌ಗೆ ಬಂದಿದೆ, ಅದನ್ನು ಪಿನ್‌ಮಾಡಿ, ಸ್ಟಾಪಲ್‌ಮಾಡಿ ಹಂಚಬೇಕಾಗಿದೆ. ಇನ್ನು ಮುಂದೆ ಅವರು ಪಿನ್.ಸ್ಟಾಪಲ್ ಮಾಡಿ ರೆಡಿಮಾಡಬೇಕು ಇಲ್ಲದಿದ್ದರೆ ಈ ಪ್ರಶ್ನೆಗಳಿಗೆ ಲಿಖಿತ ಉತ್ತರ ಬಂದಿದೆ ಎಂದು ಹೇಳುವುದು ಕೇವಲ ತಾತ್ವಿಕವಾಗಿಬಿಡುತ್ತದೆ, ಅಕಡೆಮಿಕ್ ಆಗಿಬಿಡುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ: ವಿಧಾನ ಪರಿಷತ್ತಿನ ಸದಸ್ಯರಿಗೆ ಏನು ಉತ್ತರವನ್ನು ಕೊಡಬೇಕೊ ಅದನ್ನು ನನಗೆ ಹಾಕಿದ್ದಾರೆ. ಬಹುಶಃ ನಾನು ಎಂ.ಎಲ್‌ಎ ಆಗಿರುವುದು ಅವರಿಗೆ ಜ್ಞಾಪಕವಿದಿಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ನನ್ನ ಒಂದು ಪ್ರಶ್ನೆಯೂ ಸಹ ಇದೇ ರೀತಿಯಲ್ಲಿ ವಿಧಾನ ಪರಿಷತ್ತಿನಲ್ಲಿ ಅಚ್ಚಾಗಿ ಉತ್ತರವನ್ನು ಕೊಟ್ಟಿರುತ್ತಾರೆ.

ಅಧ್ಯಕ್ಷರು: ಅದನ್ನು ನನ್ನ ಗಮನಕ್ಕೆ ತಂದರೆ ನಾನು ಅದರ ಬಗ್ಗೆ ವಿಚಾರಣೆ ಮಾಡಿ ಸಂಬಂಧಪಟ್ಟವರಿಗೆ ಸರಿಯಾಗಿ ತಿಳಿಸೋಣ.

12.40 ಪಿ. ಎಂ

ನಮ್ಮ ಕಾರ್ಯಾಲಯ ಇನ್ನೂ ಚುರುಕಾಗಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ: ಕೆಲವು ಪ್ರಾಮುಖ್ಯವಾದ ವಿಚಾರಗಳನ್ನು ಕೇಳಿದ್ದರೆ ಅಂತಹ ಪ್ರಶ್ನೆಗಳನ್ನು ಅನ್‌ಸ್ಟಾರ್ಡ್ ಮಾಡಿ..

ಅಧ್ಯಕ್ಷರು: ನೀವು ಮೊದಲನೇ ಸಾರಿ ಶಾಸನಸಭೆಗೆ ಬಂದಿದ್ದೀರಿ, ನಿಮಗೆ ಅನುಭವಸಾಲದು. ನಾನು ನಿಮಗೆ ಆಗಿಂದಾಗ್ಗೆ ಹೇಳುತ್ತಿದ್ದೇನೆ. ನಾವು ಪ್ರಶ್ನೆಗಳನ್ನು ಲಾಟರಿ ತೆಗೆಯುತ್ತೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ: ಪ್ರಶ್ನೆಗಳನ್ನು ಕಳುಹಿಸುವಾಗ ನಾವು ಇಂಪಾರ್ಟೆಂಟ್ ಎಂದು ಬರೆದಿರುತ್ತೇವೆ. ಉದಾಹರಣೆಗೆ ತೆಂಗಿನ ನಾರಿನ ಅಭಿವೃದ್ಧಿ ಮಂಡಲಿ ಈ ರಾಜ್ಯದಲ್ಲಿ ಪೂರ್ಣವಾಗಿ ಮುಚ್ಚಿ ಹೋಗಿದೆ. ಇಂಥ ಪ್ರಮುಖವಾದ ಪ್ರಶ್ನೆ ಲಾಟರಿಯಲ್ಲಿ ಬಾರದೆ ಹೋದರೆ ನಾವು ಬೇರೆ ಪ್ರಶ್ನೆಯನ್ನು ಹಾಕಿ ಕಳುಹಿಸುತ್ತೇವೆ. ಲಾಟರಿ ಎತ್ತತಕ್ಕದ್ದು ಹೆಸರನ್ನು, ಪ್ರಶ್ನೆಯದ್ದಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ತಮ್ಮ ಕಾರ್ಯಾಲಯದಲ್ಲಿ ಕೆಲಸ ಮಾಡುವುದರ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಈ ಸಾರಿ ಅಧಿವೇಶನದಲ್ಲಿ ಪ್ರಶ್ನೆ ಹಾಕತಕ್ಕದ್ದು ಮತ್ತು ಬ್ಯಾಲೆಟ್ ಮಾಡತಕ್ಕದ್ದರ ಬಗ್ಗೆ ನಾನು 2-3ಸಾರಿ ಹೋಗಿ ಎದುರಿನಲ್ಲಿ ಕುಳಿತುಕೊಂಡು ನೋಡಿದ್ದೇನೆ. ನಿಜವಾಗಿ ಹೇಳಬೇಕೆಂದರೆ ಬಹಳ ಚೆನ್ನಾಗಿ ಮಾಡುತ್ತಿದ್ದಾರೆ. ಇದನ್ನು ಅನೇಕ ಮಾನ್ಯ ಸದಸ್ಯರ ಗಮನಕ್ಕೆ ತರಬೇಕೆಂದು ಹೇಳುತ್ತಿದ್ದೇನೆ. ಮೊದಲನೇ, ಎರಡನೇ, ಮೂರನೇ ನಾಲ್ಕನೇ ಪ್ರೈಯಾರಿಟಿ ಎಂದು ಬರೆದಿರುತ್ತಾರೆ, ಅದರ ಪ್ರಕಾರ ಬ್ಯಾಲೆಟ್ ಎತ್ತುತ್ತಾರೆ. ಬಹುತೇಕ ಸಹಪಾಠಿಗಳು ಅದ್ಯತೆಯನ್ನು ಬರೆದಿರುವುದಿಲ್ಲ. ಈ ಸಾರಿ ಕ್ವೆಶ್ಚನ್ಸ್‌ನ್ನು ಬ್ಯಾಲೆಟ್‌ನಲ್ಲಿ ಎತ್ತಿದಾಗ ನಮ್ಮಂಥವರ ದುರಾದೃಷ್ಟವೋ ಏನೋ, ಪೆರಿಕಲ್ ಮಲ್ಲಪ್ಪ, ಮೋಟಮ್ಮ ಕೌಜಲಗಿ ಅವರ ಹೆಸರುಗಳಿ ಬರುತ್ತಿವೆ.

(ಗೊಂದಲ)

SRI R. V. DESHPANDE: I fully agree with the views expressed by the Hon.Deputy Leader of the Opposition. They are doing it very systematically and there is no problem as such.

ಆದರೆ ಏನು ಮಾಡುವುದು ಹೇಳಿ, ನಾವು ಇಪ್ಪತ್ತು ಪ್ರಶ್ನೆಗಳನ್ನು ಹಾಕಿದರೂ ಒಂದೂ ಬರುವುದಿಲ್ಲ.

ಶ್ರೀ ಆರ್. ದಯಾನಂದ ರಾವ್: ಪ್ರಶ್ನೆಗಳನ್ನು ಪಟ್ಟಿ ಮಾಡುವುದಕ್ಕೆ ಒಂದು ಕಮಿಟಿ ಮಾಡಿದರೆ ಒಳ್ಳೆಯದೆಂದು ನನ್ನ ಸಲಹೆ.

ಅಧ್ಯಕ್ಷರು: ನಿಮ್ಮ ಅಧ್ಯಕ್ಷತೆಯಲ್ಲೇ ಒಂದು ಕಮಿಟಿ ಮಾಡೋಣವೆ?

ಶ್ರೀ ಆರ್. ದಯಾನಂದ ರಾವ್: ಈಗ ಎಲ್ಲರೂ ಹೇಳುತ್ತಿದ್ದಾರೆ, ಇದರ ಬಗ್ಗೆ ಒಂದು ಕಮಿಟಿ ಮಾಡಿ ಆ ಕಮಿಟಿ ಮೂಲಕ ಪ್ರಶ್ನೆಗಳು ಹೊರಬಂದರೆ ಒಳ್ಳೆಯದು ಎಂದು ನನ್ನ ಸಲಹೆ.

ಶ್ರೀ ವಾಟಾಳ್ ನಾಗರಾಜ್: ಇದಕ್ಕೆ ದೊಡ್ಡ ಆಯೋಗ ರಚನೆಯಾದರೆ ಸರಿಹೋಗುತ್ತದೆ.

ಶ್ರೀಮತಿ ಮೋಟಮ್ಮ: ಕೊನೇ ಪಕ್ಷ ಈ ಲಾಟರಿಯಲ್ಲಾದರೂ ನನ್ನ ಹೆಸರು ಬರುತ್ತದಲ್ಲ ಎಂದು ಸಂತೋಷ.

ಅಧ್ಯಕ್ಷರು: ನಿಮ್ಮದು ದೊಡ್ಡ ಲಾಟರಿಯಲ್ಲಿ ಮಿಸ್ ಆದರೂ ಈ ಲಾಟರಿಯಲ್ಲಿ ಮಾತ್ರ ಆಗಿಲ್ಲ. ನಿಮಗೆ ನಮ್ಮ ಶುಭ ಕಾಮನೆಗಳು.

ಶ್ರೀ ವಾಟಾಳ್ ನಾಗರಾಜ್: ತಮ್ಮ ಕಾರ್ಯಾಲಯದ ಬಗ್ಗೆ ನಮ್ಮ ಆಕ್ಷೇಪಣೆ ಇಲ್ಲ. ಸರ್ಕಾರ ಸರಿಯಾಗಿ ಸಹಕಾರ ಕೊಡುತ್ತಿಲ್ಲ. ನನಗಂತೂ ಅದೃಷ್ಟವೇ ಇಲ್ಲ. ಬಹಳ ಕಷ್ಟವಾಗಿದೆ. ನಾನು ಮೊದಲನೆಯದಾಗಿ ಕೊಟ್ಟಿದ್ದರೂ ಬರಲಿಲ್ಲ. ಎರಡು ದಿನಗಳಿಂದ ನೋಡುತ್ತಿದ್ದೇನೆ, ಐದೈದು ಪ್ರಶ್ನೆಗಳು ಲಿಖಿತ ಮೂಲಕ ಎಂದು ಬಂದಿವೆ. ಪ್ರಶ್ನೆಗಳು ಬರುವುದಕ್ಕೆ ಆರ್ಶಿರ್ವಾದ ಮಾಡಿದರೆ ಒಳ್ಳೆಯದು. ಏನಾದರೂ ಮಾಡಿ ಸಹಕಾರ ಮಾಡಿ.

ಅಧ್ಯಕ್ಷರು: ಆರ್ಶಿರ್ವಾದ ಮಾಡಬಲ್ಲೆ, ಆದರೆ ಸಹಕಾರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ: ಸರ್ಕಾರದಿಂದ ಪ್ರಶ್ನೆಗಳಿಗೆ ಉತ್ತರ ಬರುವುದು ಏತಕ್ಕೆ ತಡವಾಗುತ್ತಿದೆ ಎಂದು ಗೊತ್ತಿದೆ. ಕೇವಲ 15 ದಿನಗಳ ಮುಂದೆ ವಿಧಾನಸಭೆ ನಡೆಯುತ್ತದೆಂದು ತಿಳಿಸಿ ಪ್ರಶ್ನೆ ಕೇಳಿದರೆ ಉತ್ತರ ಕಳುಹಿಸುವುದಕ್ಕೆ ವಿಳಂಬವಾಗುತ್ತದೆ. ವಿಧಾನ ಸಭೆಯನ್ನ ಕರೆಯುವ ದಿನಾಂಕವನ್ನು ಮುಂಚಿತವಾಗಿ ತಿಳಿಸಿದರೆ ಈ ಸಮಸ್ಯೆ ತಪ್ಪುತ್ತದೆ. ಈ ರೀತಿ ಮಾಡಲಿಕ್ಕೆ ಪ್ರಯತ್ನ ಮಾಡಿ ಹೆಚ್ಚು ಕಾಲಾವಕಾಶವನ್ನು ತೆಗೆದುಕೊಂಡರೆ ಪ್ರಶ್ನೆಗಳಿಗೆ ಕಾಲಕ್ಕೆ ಸರಿಯಾಗಿ ಉತ್ತರ ಬರುತ್ತದೆ, ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಇದನ್ನು ಸರ್ಕಾರದವರು ಗಮನಿಸಬೇಕು.

ಶ್ರೀ ಕೆ. ಲಕ್ಕಪ್ಪ: ಅನ್‌ಸ್ಟಾರ್ಡ್ ಪ್ರಶ್ನೆಗಳ ವಿಚಾರ ಮಾತನಾಡಿದ್ದು ಆಯಿತು. ಆದರೆ ಸ್ಟಾರ್ಡ್ ಕ್ವೆಶ್ಚನ್ಸ್ 5-6 ಕ್ಕೆ ನಿಂತುಹೋಗುತ್ತವೆ. ಪ್ರಶ್ನೋತ್ತರ ವೇಳೆಯನ್ನು ಒಂದು ಗಂಟೆ ಎಂದು ಗೊತ್ತು ಮಾಡಿದ್ದೀರಿ. ಅನೇಕ ಪ್ರಮುಖ ವಿಚಾರಗಳನ್ನು ಪ್ರಸ್ತಾಪ ಮಾಡುವಾಗ ಒಂದು ಗಂಟೆಗಿಂತ ಜಾಸ್ತಿ ಸಮಯ ಬೇಕಾಗುತ್ತದೆ. ಅದು ನಿಮ್ಮ ಕೈಯಲ್ಲಿ ಸಾಧ್ಯವಾಗದೆ ಇರಬಹುದು. ಆದರೆ ಬಂದಿರತಕ್ಕ ಪಟ್ಟಿಯಲ್ಲಿ ಏನು ಪ್ರಶ್ನೆಗಳು ಇವೆ, ಅವುಗಳಾದರೂ ಪೂರ್ತಿಯಾಗುವವರೆಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇರಬೇಕು. ಬಹಳ ಮುಖ್ಯವಾದ ಪ್ರಶ್ನೆಗಳು ಕೊನೆಯಲ್ಲಿ ಬಂದಿರುತ್ತವೆ. ಕೆಲವು ಸಾರಿ ಮಧ್ಯೆ ಯಾವುದೋ ಪ್ರಶ್ನೆಗೆ ಅರ್ಧ ಗಂಟೆ ಎಳೆದುಕೊಂಡು ಹೋಗುತ್ತದೆ.

ಇವತ್ತು ಬಹಳ ಮುಖ್ಯವಾದ ಪ್ರಶ್ನೆಯನ್ನು ಕೇಳಬೇಕೆಂದಿದ್ದೆ; ಅಷ್ಟರಲ್ಲಿ ಪ್ರಶ್ನೋತ್ತರ ವೇಳೆ ಮುಗಿದುಹೋಯಿತು.

ಆದ್ದರಿಂದ ಅನೇಕ ಸದಸ್ಯರಿಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇಲ್ಲದಂತಾಗುತ್ತದೆ. ಇದನ್ನು ಸ್ವಲ್ಪ ವಿಚಾರ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ: ಇಷ್ಟೆಲ್ಲಾ ಚರ್ಚೆ ಆದಮೇಲೂ ನನ್ನ ಸಮಸ್ಯೆ ಬಗೆಹರಿಯಲಿಲ್ಲ. ನನ್ನ ಸಮಸ್ಯೆ ಇರತಕ್ಕದ್ದು ಏನೆಂದರೆ ಕಳೆದ ಅಧಿವೇಶನದಲ್ಲಿ ಅನ್‌ಸ್ಟಾರ್ಡ್ ಆಗಿರತಕ್ಕ ಪ್ರಶ್ನೆಗಳಿಗೆ ಇಲ್ಲಿಯವರೆಗೆ ಉತ್ತರ ಬಂದಿಲ್ಲ. ನಾವು ಏತಕ್ಕೆ ಪ್ರಶ್ನೆ ಕೇಳಬೇಕು? ಅಧ್ಯಕ್ಷರೇ, ತಾವು ದಯವಿಟ್ಟು ಏನು ಅಪ್ಪಣೆ ಕೊಡಿಸುತ್ತೀರೋ ಹಾಗೆ ನಡೆದುಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ, ಇಷ್ಟೆಲ್ಲಾ ಮಾತನಾಡಿದಮೇಲೆ ಸರ್ಕಾರ ಇದಕ್ಕೆ ಸರಿಯಾಗಿ ಸ್ಪಂದಿಸುತ್ತದೆ. ಹಿಂದೆ ಕಳುಹಿಸಿದ್ದ ಅನ್‌ಸ್ಟಾರ್ಡ್ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ ಎಂದು ಹೇಳಿದ್ದಾರೆ. ಈ ಸದನದಲ್ಲಿ ಪ್ರಶ್ನೆ ಕೇಳಿರುವುದಕ್ಕೆ ಸರಿಯಾದ ಉತ್ತರ ಕೊಡುವ ವ್ಯವಸ್ಥೆ ಮಾಡುತ್ತೇವೆ. ತ್ವರಿತವಾಗಿ ಪರಿಶೀಲಿಸಿ ಉತ್ತರ ಕಳುಹಿಸುವುದಕ್ಕೆ ಸಂಬಂದಪಟ್ಟ ಇಲಾಖೆಗೆ ಸುತ್ತೋಲೆ ಕಳುಹಿಸಿ ಪ್ರತಿ ಇಲಾಖೆಯಲ್ಲಿ ಲೆಜಿಸ್ಲೇಚರ್ ಬಗ್ಗೆ ಮಾನಿಟರ್ ಮಾಡಿ ಪ್ರಶ್ನೆಗಳಿಗೆ ಉತ್ತರ ಕಳುಹಿಸುವುದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನೇ ನೇಮಕ ಮಾಡಿ ಪ್ರತ್ಯೇಕವಾದ ವ್ಯವಸ್ಥೆ ಮಾಡುತ್ತಿದ್ದೇವೆ. ಅದರ ಪ್ರಕಾರ ಕ್ಷಿಪ್ರವಾಗಿ ಸರಿಯಾಗಿ ಸ್ಪಂದಿಸಿ...

ಶ್ರೀ ಪಿ.ಜಿ.ಆರ್. ಸಿಂಧ್ಯ: ತಾವು ಮಂತ್ರಿಗಳಾಗಿ ಹಿಂದೆಯೂ ಕೆಲಸ ಮಾಡಿದ್ದೀರಿ, ಈಗಲೂ ಮಾಡುತ್ತಿದ್ದೀರಿ. ನಾವು ಕೆಲಸ ಮಾಡಿದ್ದೇವೆ. ಪ್ರತಿಯೊಂದು ಇಲಾಖೆಯಲ್ಲಿ ಇದಕ್ಕೋಸ್ಕರ ಒಬ್ಬ ಆಫೀಸರನ್ನು ಅಲ್ಲಿರತಕ್ಕ ಸೆಕ್ರೆಟರಿಗಳು ಅಪಾಯಿಂಟ್ ಮಾಡಿರುತ್ತಾರೆ. ಮಂತ್ರಿಗಳು ಯಾವ ಯಾವ ಪ್ರಶ್ನೆಗಳಿಗೆ ಏತಕ್ಕೆ ಉತ್ತರ ಬಂದಿಲ್ಲ ಎಂಬುದನ್ನು ನೋಡಬೇಕು. ಕೆಲವು ಸಂದರ್ಭಗಳಲ್ಲಿ ಕೆಳಮಟ್ಟದಿಂದ ಉತ್ತರ ಬರಬೇಕಾಗುತ್ತದೆ, ಬೀದರ್, ಗುಲ್ಬರ್ಗದಿಂದ ಉತ್ತರ ಬರಬೇಕಾಗುತ್ತದೆ. ಅಸೆಂಬ್ಲಿ ನಡೆಯುವುದಕ್ಕೆ ಮುಂಚೆ ಬಂದು ಅಪ್ರೂವ್ ಮಾಡಿ ಎಂದು ಹೇಳುತ್ತಾರೆ. ನೀವು ಅಪ್ರೂವ್ಡ್ ಎಂದು ಬರೆದು ಕಳುಹಿಸುತ್ತೀರಿ. ಆಮೇಲೆ ಅದು ಸೈಕ್ಲೋಸ್ಟೈಲ್ ಆಗಬೇಕು. ಈ ಪ್ರೊಸೀಜರ್ ಹೋಗಬೇಕಾದರೆ ಕ್ಯಾಬಿನೆಟ್‌ನಲ್ಲಿ ಇಂಥ ದಿವಸ ಅಧಿವೇಶನ ಕರೆಯಬೇಕು ಎಂದು ತೀರ್ಮಾನ ಆದಮೇಲೆ 5-6 ದಿವಸ ಆದಮೇಲೆ ನಿಮಗೆ ಕ್ವೆಶ್ಚನ್ಸ್ ಬರುತ್ತವೆ. ವಿವಿಧ ಇಲಾಖೆಗಳ ಮುಖ್ಯಾಧಿಕಾರಿಗಳನ್ನು ಕರೆದು ಮಂತ್ರಿಗಳು ರಿವ್ಯೂ ಮಾಡಿದರೆ ಸಮಸ್ಯೆ ಪರಿಹಾರವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಈಗ ಇರತಕ್ಕ ಅಭ್ಯಾಸದ ಪ್ರಕಾರ, ತಮಗೆ ಗೊತ್ತಿದೆ, ಸದಸ್ಯರು ಪ್ರಶ್ನೆ ಕೇಳಿದರೆ ಲೆಜಿಸ್ಲೇಚರ್ ಕಾರ್ಯಾಲಯದಿಂದ ನೇರವಾಗಿ ಸಂಬಂಧಪಟ್ಟ ಆಡಳಿತ ಕಾರ್ಯದರ್ಶಿಯವರಿಗೆ ಹೋಗುತ್ತದೆ. ಮಂತ್ರಿಗಳಿಗೆ ಅದು ಬರುವುದಿಲ್ಲ. ಉತ್ತರ ಮಂಜೂರು ಮಾಡತಕ್ಕ ಸಂದರ್ಭದಲ್ಲಿ ಮಾತ್ರ ಅದು ನಮಗೆ ಬರುತ್ತದೆ. ಇನ್ನು ಮುಂದೆ ತಮ್ಮ ಸೆಕ್ರೆಟೇರಿಯೆಟ್ ಜೊತೆ ಸಮಾಲೋಚನೆ ಮಾಡಿ ಪ್ರಶ್ನೆಯ ಒಂದು ಪ್ರತಿ ಸೆಕ್ರೆಟರಿಯವರಿಗೆ ಕಳುಹಿಸಿ ಇನ್ನೊಂದು ಪ್ರತಿಯನ್ನು ಮಂತ್ರಿಗಳ ಸಚಿವಾಲಯಕ್ಕೂ ಕಳುಹಿಸಿದರೆ ಸರಿಯಾಗಿ ಮಾನಿಟರ್ ಮಾಡುವುದಕ್ಕೆ ಮತ್ತು ಪ್ರಶ್ನೆಗಳಿಗೆ ಉತ್ತರ ಕಳುಹಿಸುವುದಕ್ಕೆ ಅನುಕೂಲವಾಗುತ್ತದೆ. ಹೊಸ ವ್ಯವಸ್ಥೆಯನ್ನು ತಮ್ಮ ಸೆಕ್ರೆಟೆರಿಯೆಟ್ ಜೊತೆ ಮಾತನಾಡಿ ಒಂದು ಪ್ರತಿ ಆಡಳಿತಕ್ಕೆ ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ಕಳುಹಿಸಿ, ಸಂಬಂಧಪಟ್ಟ ಸಚಿವರ ಕಾರ್ಯಾಲಯಕ್ಕೂ ಒಂದು ಪ್ರತಿ ಕಳುಹಿಸಿದರೆ ಸಮರ್ಪಕವಾಗಿ ಮಾನಿಟರ್ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು

ಅನ್ನಿಸುತ್ತಿದೆ. ತಾವು ಹೇಳಿದಹಾಗೆ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರ ಕೊಡಿಸತಕ್ಕ ಎಲ್ಲ ಪ್ರಯತ್ನಗಳನ್ನು ಮಾಡುತ್ತೇವೆ.

ಶ್ರೀ ಎಚ್. ಏಕಾಂತಯ್ಯ: 15 ದಿವಸಕ್ಕೆ ಮೊದಲು ಪ್ರಶ್ನೆ ಕಳುಹಿಸಬೇಕು ಎಂದು ಹೇಳುತ್ತೀರಿ. ಅದಕ್ಕೆ ಸಾಕಷ್ಟು ಕಾಲಾವಕಾಶ ಕೊಡದೇ ಅದನ್ನು ಮಾನ್ಯ ಸಭಾಧ್ಯಕ್ಷರು 10 ದಿವಸಕ್ಕೆ, 7 ದಿವಸಕ್ಕೆ ಕಡಿಮೆ ಮಾಡಿದ್ದಾರೆ. ಇಂತಹ ಒಂದು ಪರಿಸ್ಥಿತಿ ಉದ್ಭವವಾಗಿರುವುದರಿಂದ ಪ್ರಶ್ನೆಗಳಿಗೆ ಉತ್ತರ ಕಳುಹಿಸುವುದಕ್ಕೆ ತಡವಾಗುತ್ತದೆ, ಅದನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡಬೇಕು. ಇಂಥ ದಿವಸ ಅಸೆಂಬ್ಲಿ ಕರೆಯಬೇಕು ಎಂದು ಮೊದಲೇ ಮಾಡುವುದರಿಂದ ಇದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಇದ್ದಕ್ಕಿದ್ದಹಾಗೆ ತಾವು ಮಾಡುವುದರಿಂದ ಈ ರೀತಿ ತೊಂದರೆ ಆಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಈ ವಿಶೇಷ ಪರಿಸ್ಥಿತಿ ಉದ್ಭವವಾಗುವುದಕ್ಕೆ ವಿಶೇಷವಾದ ಕೆಲವು ವಿಷಯಗಳು ಬಂತು. ತಮಗೆ ಗೊತ್ತಿದೆ, ನಮ್ಮ ರಾಜ್ಯಪಾಲರು He is in concurrent charge of the Government of Goa and Government of Karnataka ಬಹುಶಃ ಇಂಥ ಪರಿಸ್ಥಿತಿ ಮುಂದೆ ಉದ್ಭವವಾಗುವುದಿಲ್ಲ. ಆದ್ದರಿಂದ ನಮ್ಮ ಸರ್ಕಾರದ ಮಟ್ಟಿಗೆ, ಮಂತ್ರಿ ಮಂಡಲದ ಮಟ್ಟಿಗೆ ಹೇಳುವುದಾದರೆ, ಕ್ಷುಪ್ತ ಸಮಯಕ್ಕೆ ಅಂದರೆ 15 ದಿವಸ ಕಾಲಾವಕಾಶ ಒದಗಿಸಿ ಅಧಿವೇಶನ ಮಾಡಬೇಕೆಂಬ ಸದಿಚ್ಛೆ ಇದೆ. ಆದುದರಿಂದ ಇದನ್ನು ಮುಂದೆ ಸರಿಪಡಿಸುತ್ತೇವೆ.

ನಿಯಮ 334 ರ ಮೇರೆಗೆ

1) ಶಿಕ್ಷಣ ಇಲಾಖೆಯಲ್ಲಿ ಅನುಕಂಪದ ಆದಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಗಳನ್ನು ಭರ್ತಿ ಮಾಡದಿರುವುದು

ಶ್ರೀ ಪೆರಿಕಲ್ ಎಂ. ಮಲ್ಲಪ್ಪ: ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸೇವೆಯಲ್ಲಿದ್ದಾಗಲೇ ನೂರಾರು ಶಿಕ್ಷಕರು ಹಾಗೂ ಇತರ ಸರ್ಕಾರಿ ನೌಕರರು ಮೃತ ಹೊಂದಿದ್ದು, ಅವರ ಕುಟುಂಬ ಸದಸ್ಯರೊಬ್ಬರಿಗೆ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತೆ ಹುದ್ದೆಯನ್ನು ಕೂಡಲೇ ನೀಡಬೇಕೆಂದು ಸರ್ಕಾರಿ ಆದೇಶವಿದ್ದರೂ ಕೂಡಾ, ಕಳೆದ 2-3 ವರ್ಷದಿಂದ ಸುಮಾರು 350 ಜನ ಅರ್ಜಿದಾರರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ, ನೇಮಕ ಮಾಡಿರುವುದಿಲ್ಲ. ಇದರಿಂದಾಗಿ, ಈ ಕುಟುಂಬ ವರ್ಗದವರಿಗೆ ಬಹಳ ತೊಂದರೆಯಾಗಿದೆ.

ಆದುದರಿಂದ ಸರ್ಕಾರದವರು ಈ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ ಇರತಕ್ಕ ಎಲ್ಲಾ ಅರ್ಜಿದಾರರಿಗೂ ಕೂಡಲೇ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಯನ್ನು ನೀಡಬೇಕೆಂದು ಕೋರುತ್ತೇನೆ. ಒಂದು ವೇಳೆ ಈ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇಲ್ಲದಿದ್ದಲ್ಲಿ ಅವರುಗಳಿಗೆ ಬೇರೆ ಇಲಾಖೆಯಲ್ಲಾದರೂ ಕೆಲಸ ನೀಡಲು ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಶಿಕ್ಷಣ ಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳು ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗಲೇ ನಿಧಾನರಾದ ಸರ್ಕಾರಿ ನೌಕರರ ಅವಲಂಭಿತರಿಗೆ ಅನುಕಂಪದ ಆಧಾರದ ಮೇಲೆ ಗ್ರೂಪ್-ಸಿ ಹುದ್ದೆಯಲ್ಲಿ ನೇಮಕಾತಿಗೆ ಸಂಬಂಧಿಸಿದಂತೆ ಸುಮಾರು 400 ಕ್ಕೂ ಹೆಚ್ಚು ಪ್ರಕರಣಗಳು ಶಿಕ್ಷಣ ಇಲಾಖೆಯಲ್ಲಿ ಬಾಕಿ ಉಳಿದಿವೆ. ಶಿಕ್ಷಣ ಇಲಾಖೆಯಲ್ಲಿ ಗ್ರೂಪ್-ಸಿ ಹುದ್ದೆ ಅಂದರೆ ಗುಮಾಸ್ತರ ಹುದ್ದೆಗಳು ಬಹಳ ಕಡಿಮೆ ಇದ್ದು ಅನುಕಂಪದ ಆಧಾರದ ಅಭ್ಯರ್ಥಿಗಳು ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಸರ್ಕಾರದ ಸುತ್ತೋಲೆ ಸಂಖ್ಯೆ ಡಿಪಿಎಆರ್ 30 ಎಸ್ಆರ್ಆರ್ 84 ದಿನಾಂಕ